ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂಖ್ಯೆ: DHS/DD/SSU/17/2019-20 ದಿನಾಂಕ:23-04-2020

**ಸುತ್ತೋಲೆ**

**ವಿಷಯ**: ಕೋವಿಡ್-19 ಸೋಂಕಿರುವ ಜಿಲ್ಲೆಗಳ ಪತ್ರಕರ್ತರಿಗೆ ಕೋವಿಡ್-19 ಪ್ರಯೋಗಾಲಯ ಪರೀಕ್ಷೆ ಮಾಡುವ ಕುರಿತು.

****

1. ಜಗತ್ತಿನಾದ್ಯಂತ ಕೊರೋನಾ-2 ಸೋಂಕಿನಿಂದ ಉಂಟಾಗುವ ಕೋವಿಡ್-19 ಅನಾರೋಗ್ಯದಿಂದ ಅನೇಕ ಸಾವು ನೋವುಗಳು ಇತ್ತೀಚಿನ ದಿನಗಳಲ್ಲಿ ಉಂಟಾಗಿರುತ್ತವೆ. ಭಾರತದಲ್ಲಿ ಈವರೆಗೆ 19,343 ಪ್ರಕರಣಗಳು ವರದಿಯಾಗಿದ್ದು 640 ಸಂಖ್ಯೆಯ ಸಾವುಗಳು ಉಂಟಾಗಿರುತ್ತದೆ. ಕರ್ನಾಟಕದಲ್ಲಿ 427 ಪ್ರಕರಣಗಳು ವರದಿಯಾಗಿದ್ದು ಅವುಗಳ ಪೈಕಿ 17 ಮರಣಗಳು ಸಂಭವಿಸಿರುತ್ತವೆ. ಶೀಘ್ರ ಹರಡುವ ಸಾಮರ್ಥ್ಯವಿರುವ ಈ ಸೋಂಕಿನಿಂದಾಗಿ ಸಾರ್ವಜನಿಕರು ಭಯಬೀತರಾಗಿರುತ್ತಾರೆ. ರೋಗ ಹರಡದಂತೆ ನಿಯಂತ್ರಿಸುವಲ್ಲಿ ಕರ್ನಾಟಕ ಸರ್ಕಾರ ಪ್ರಾರಂಭದಿಂದಲೂ ಹಲವಾರು ತಂತ್ರಗಳನ್ನು ಅನುಸರಿಸಿ ಅನೇಕ ನಿಯಂತ್ರಣ ಕಾರ್ಯಕ್ರಮಗಳನ್ನು ಹಂತಹಂತವಾಗಿ ಕೈಗೊಳ್ಳಲಾಗಿರುತ್ತದೆ.

2. ಸೋಂಕಿರುವ ವ್ಯಕ್ತಿ ಮತ್ತು ಅವರ ಸಂಪರ್ಕಿತರನ್ನು ಶೀಘ್ರವಾಗಿ ಪತ್ತೆ ಮಾಡಿ ಅಗತ್ಯ ಚಿಕಿತ್ಸೆಗಾಗಿ ಆಸ್ಪತ್ರೆ ಮತ್ತು ನಿರ್ಬಂಧಕ್ಕಾಗಿ ಮನೆ ಅಥವಾ ಸಾಂಸ್ಥಿಕ ನಿರ್ಬಂಧಗಳು, ಆರೋಗ್ಯವಂತ ವ್ಯಕ್ತಿಗಳನ್ನು ಸೋಂಕಿನಿಂದ ರಕ್ಷಿಸಲು ವಿಸ್ತೃತ ಆರೋಗ್ಯ ಶಿಕ್ಷಣ, ಮಾಹಿತಿ ಸಂವಹನ ಮುಂತಾದ ಕಾರ್ಯಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗಿರುತ್ತದೆ. ಅನೇಕ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಆರೋಗ್ಯ ಇಲಾಖೆಯ ಜೊತೆಗೆ ಮುಂಚೂಣಿ ಕಾರ್ಯಕರ್ತರಾಗಿ ಸೋಂಕಿನ ವಿರುದ್ಧ ಹೋರಾಡುತ್ತಿದ್ದಾರೆ. **ಈ ನಿಟ್ಟಿನಲ್ಲಿ ಮಾಧ್ಯಮದ ಪತ್ರಕರ್ತರು ಸಹಕರಿಸುತ್ತಿದ್ದಾರೆ**.

3. ಕೋವಿಡ್-19 ಕುರಿತಂತೆ ಶ್ರೀ ಎಸ್. ಸುರೇಶ್‌ಕುಮಾರ್, ಮಾನ್ಯ ಶಿಕ್ಷಣ ಸಚಿವರ ಕೋರಿಕೆಯಂತೆ ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರು ತಮ್ಮ ಟಿಪ್ಪಣಿಯಲ್ಲಿ "ಎಲ್ಲಾ ಪತ್ರಕರ್ತರಿಗೆ ಅಗತ್ಯ ತಪಾಸಣಾ ಶಿಬಿರ ಏರ್ಪಡಿಸಲು ಸೂಚಿಸಿದೆ" ಎಂದು ಆದೇಶಿಸಿರುತ್ತಾರೆ.



S-PKS

3ನೇ ಮಹಡಿ, ಐಪಿಪಿ ಕಟ್ಟಡ, ಆನಂದ್ ರಾವ್ ವೃತ್ತ, ಬೆಂಗಳೂರು - 560 009.

4. ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಇವರು ತಮ್ಮ ಆದೇಶ ಸಂಖ್ಯೆ:HFW 89 ACS 2020 ದಿನಾಂಕ: 22.04.2020 ರಂತೆ ಈ ರೀತಿ ಆದೇಶಿಸಿರುತ್ತಾರೆ. ***(Quote) A. Indications for TR-PCR(Throat Swab + Nasal Swab):*** *vii- All journalists involved in COVID-19 reporting as per the list provided by Department of information and Publicity (Unquote).*

5. ಬೆಂಗಳೂರಿನ ಪತ್ರಕರ್ತರಿಗೆ ಕೋವಿಡ್-19 ಸಂಬಂಧ ಪ್ರಯೋಗಶಾಲ ಪರೀಕ್ಷೆಗಳನ್ನು ಈಗಾಗಲೇ ದಿನಾಂಕ:23.04.2020 ರಿಂದ ಪ್ರಾರಂಭಿಸಲಾಗಿರುತ್ತದೆ. ಪರೀಕ್ಷೆಯ ಮುಂದುವರೆದ ಭಾಗವಾಗಿ ಉಳಿದ 19 ಜಿಲ್ಲೆಗಳ ಪತ್ರಕರ್ತರ ಕೋವಿಡ್-19 ಪ್ರಯೋಗಶಾಲ ಪರೀಕ್ಷೆಗಳನ್ನು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕೈಗೊಳ್ಳಲು ಕೆಳಕಂಡಂತೆ ರೂಪುರೇಷೆ ಸಿದ್ಧಪಡಿಸಿ ನೀಡಲಾಗಿದೆ.

**ಅ. ಪತ್ರಕರ್ತರ ಪಟ್ಟಿ ಲಭ್ಯತೆ:** ಜಿಲ್ಲೆಯಲ್ಲಿ ಕೋವಿಡ್ ಸಂಬಂಧಿತ ಕರ್ತವ್ಯದಲ್ಲಿ ತೊಡಗಿಸಿಕೊಂಡಿರುವ ಪತ್ರಕರ್ತರ ಪಟ್ಟಿ, ಮತ್ತು ದೂರವಾಣಿ ಸಂಖ್ಯೆ ವಿವರಗಳನ್ನು ಈ ಕೂಡಲೇ ಜಿಲ್ಲಾಧಿಕಾರಿಗಳಿಗೆ ನೀಡುವುದೂ ಅಲ್ಲದೇ ಕೋವಿಡ್-19 ಪರೀಕ್ಷೆಗಳ ಪೂರ್ಣ ನಿರ್ವಹಣೆಯ ಜವಾಬ್ದಾರಿಯನ್ನು ನಿರ್ವಹಿಸುವುದು.

**ಆ. ಸ್ಥಳ** : ಜಿಲ್ಲಾ ಆಸ್ಪತ್ರೆ.

**ಇ. ಪರೀಕ್ಷೆಯ ಜವಾಬ್ದಾರಿ** : ಜಿಲ್ಲೆಗಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು / ಜಿಲ್ಲಾ ಶಸ್ತ್ರಚಿಕಿತ್ಸಕರು ಹಾಗೂ ವೈದ್ಯಕೀಯ ಅಧೀಕ್ಷಕರು.

**ಈ. ಪರೀಕ್ಷೆಯ ದಿನಾಂಕ ಮತ್ತು ವೇಳೆ**: ದಿನಾಂಕ: 24.04.2020ರ ಶುಕ್ರವಾರದಿಂದ ಪ್ರಾರಂಬಿಸಿ ನಿರಂತರವಾಗಿ ಒಂದು ಅಥವಾ ಎರಡು ದಿನಗಳಲ್ಲಿ ಪ್ರತಿನಿತ್ಯ ಪೂರ್ವಾಹ್ನ 10.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ (ಊಟದ ಅವಧಿಯನ್ನು ಹೊರತುಪಡಿಸಿ).

**ಉ. ವಿಧಾನ:**

- ಪೂಲ್ಡ್ ಸ್ಯಾಂಪಲ್ ಮಾದರಿಯಲ್ಲಿ ಗಂಟಲಿನ ದ್ರವ ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಕೋವಿಡ್19 ರ ಪರೀಕ್ಷೆ ಮಾಡುವುದು. ಆದರೆ, ಲಭ್ಯವಿರುವ ಸಾಮಾಗ್ರಿಗಳು ಹಾಗೂ ಜನಾರೋಗ್ಯ ಅಗತ್ಯಗಳನ್ನು ಅವಲಂಬಿಸಿ ಪೂಲ್ ಅಥವಾ ವ್ಯಕ್ತಿಗತ ಮಾದರಿಯ ಬಗ್ಗೆ ಅಂತಿಮ ನಿರ್ಧಾರ ವೈದ್ಯರ ವಿವೇಚನೆಗೆ ಬಿಡಲಾಗಿದೆ.
- ಪ್ರತಿನಿತ್ಯ ಪ್ರಯೋಗಶಾಲ ಸಾಮರ್ಥ್ಯದ ಮೇಲೆ 50 ರಿಂದ 100 ದ್ರವ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷಿಸತಕ್ಕದ್ದು.
- ಅಗತ್ಯವಿರುವ ಸ್ಥಳ ಮತ್ತು ದ್ರವ ಸಂಗ್ರಹಣಾ ಬೂತ್‌ನ್ನು ಸ್ಥಾಪಿಸಿಕೊಂಡು ಇಲಾಖೆ ನೀಡಿರುವ ಮಾರ್ಗಸೂಚಿಯಂತೆ ಪರಸ್ಪರ ವ್ಯಕ್ತಿಗಳಲ್ಲಿ ಸಾರ್ವಜನಿಕ ಅಂತರವನ್ನು ಕಾಪಾಡುವ ನಿಟ್ಟಿನಲ್ಲಿ ಕೂರುವ ವ್ಯವಸ್ಥೆ, ಕೊಠಡಿ, ಸಂಗ್ರಹಣಾ ವ್ಯವಸ್ಥೆ ಮತ್ತು ಈ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಿಕೊಂಡು ಈ ಕಾರ್ಯಕ್ರಮವನ್ನು ಮಾಡತಕ್ಕದ್ದು.



S-PKS

**6. ಸುರಕ್ಷತಾ ಕ್ರಮಗಳು:**

- ಪ್ರತಿನಿತ್ಯ 100 ಜನರ ಮಾದರಿ ಸಂಗ್ರಹಕ್ಕೆ ಅಗತ್ಯವಿರುವ ಸಿಬ್ಬಂದಿ, ಅವರ ರಕ್ಷಣಾ ಉಡುಪು ಮತ್ತು ಕವಚ, ಶುಚಿತ್ವ ಇತ್ಯಾದಿಗಳನ್ನು ಕೂಡಲೇ ವ್ಯವಸ್ಥೆ ಮಾಡಕೊಳ್ಳತಕ್ಕದ್ದು.
- ಪತ್ರಕರ್ತರಿಗೆ ಅಗತ್ಯವಿರುವ ಕೈತೊಳೆಯುವ ವ್ಯವಸ್ಥೆ, ಸ್ಯಾನಿಟೈಸರ್, ಟಿಶ್ಯು ಪೇಪರ್, ಡಸ್ಟಬಿನ್ ಮುಂತಾದ ವ್ಯವಸ್ಥೆಗಳನ್ನು ಮಾಡಿ ಅಗತ್ಯ ಸೂಚನಾ ಫಲಕಗಳನ್ನು ಪ್ರದರ್ಶಿಸುವುದು.

**7. ಸಂಗ್ರಹಣೆ:**

- ಜಿಲ್ಲೆಯಲ್ಲಿರುವ ಒಟ್ಟು ಪತ್ರಕರ್ತರ ಪರೀಕ್ಷೆಗೆ ಅಗತ್ಯವಿರುವ ಕೋವಿಡ್-19 ಪರೀಕ್ಷೆಗೆ ಅಗತ್ಯವಾದ ಸಲಕರಣೆಗಳನ್ನು ಈ ಕೂಡಲೇ ಸಂಗ್ರಹಿಸುವುದು.
- ಪ್ರತಿನಿತ್ಯ 100 ಪರೀಕ್ಷೆಗಳನ್ನು ಮಾಡುವ ನಿಟ್ಟಿನಲ್ಲಿ ಪ್ರಯೋಗಶಾಲೆಯ ಬಲವರ್ಧನೆ ಮಾಡಿಕೊಳ್ಳುವುದು.

**8. ಸೌಲಭ್ಯಗಳು:**

- ಕುಡಿಯುವ ನೀರು ಅದರೊಂದಿಗೆ ಪೇಪರ್ ಕಪ್‌ಗಳು, ಲಘು ಪಾನೀಯ ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಮಾಡುವುದು.

9. **ವರದಿ:**

- ದೈನಂದಿನ ವರದಿಯನ್ನು ಅಂದರೆ, ಉದ್ದೇಶಿತ ಪರೀಕ್ಷೆಗಳ ಸಂಖ್ಯೆ, ಆಗಮಿಸಿದವರ ವಿವರ, ಮತ್ತು ಪ್ರಯೋಗಾಲಯ ಪರೀಕ್ಷಾ ನಂತರದ ವರದಿಯನ್ನು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಹಾಗೂ ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರಿಗೆ ಸಲ್ಲಿಸುವುದು.

**10. ವಿಶೇಷ ಸೂಚನೆ: ಈ ಸೂತ್ತೋಲೆಯಲ್ಲಿರುವ ಮಾರ್ಗಸೂಚಿಗಳು ಕೋವಿಡ್-19 ಸೋಂಕಿತ ಜಿಲ್ಲೆಗಳಿಗೆ ಮಾತ್ರ ಅನ್ವಯಿಸುತ್ತದೆ.**

23.4.20

ಆಯುಕ್ತರು,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಗೆ,

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
2. ಎಲ್ಲಾ ಜಿಲ್ಲೆಗಳ ಪೋಲಿಸ್ ಅಧೀಕ್ಷಕರು
3. ಎಲ್ಲಾ ಜಿಲ್ಲೆಗಳ ವಾರ್ತಾ ಮತ್ತು ಸಂಪರ್ಕ ಅಧಿಕಾರಿಗಳು.
4. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು
5. ಎಲ್ಲಾ ಜಿಲ್ಲೆಗಳ ಜಿಲ್ಲಾ ಶಸ್ತ್ರಚಿಕಿತ್ಸಕರು ಹಾಗೂ ವೈದ್ಯಕೀಯ ಅಧೀಕ್ಷಕರು.

ಪ್ರತಿಯನ್ನು:

1. ಮುಖ್ಯಮಂತ್ರಿಗಳ ಆಪ್ತಕಾರ್ಯದರ್ಶಿಯವರ ಗಮನಕ್ಕೆ ಮತ್ತು ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಅವಗಾಹನೆಗೆ ತರಲು ಕೋರಲಾಗಿದೆ.
2. ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಯವರ ಗಮನಕ್ಕೆ ಮತ್ತು ವಿಷಯವನ್ನು ಮಾನ್ಯ ಶಿಕ್ಷಣ ಸಚಿವರ ಅವಗಾಹನೆಗೆ ತರಲು ಕೋರಲಾಗಿದೆ.
3. ಆರೋಗ್ಯ ಸಚಿವರ ಆಪ್ತಕಾರ್ಯದರ್ಶಿಯವರ ಗಮನಕ್ಕೆ ಮತ್ತು ವಿಷಯವನ್ನು ಮಾನ್ಯ ಆರೋಗ್ಯ ಸಚಿವರ ಅವಗಾಹನೆಗೆ ತರಲು ಕೋರಲಾಗಿದೆ.
4. ವೈದ್ಯಕೀಯ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಯವರ ಗಮನಕ್ಕೆ ಮತ್ತು ವಿಷಯವನ್ನು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅವಗಾಹನೆಗೆ ತರಲು ಕೋರಲಾಗಿದೆ.
5. ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
6. ಅಪರ ಮುಖ್ಯಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂ.
7. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂ.
8. ಶ್ರೀ ಜೆ. ಮಂಜುನಾಥ್, ಐ.ಎ.ಎಸ್., ವಿಶೇಷಾ ಕರ್ತವ್ಯಾಧಿಕಾರಿ, ಕೋವಿಡ್-19.
9. ಶ್ರೀ ಎನ್. ಸಿದ್ರಾಮಪ್ಪ ಐ.ಪಿ.ಎಸ್., ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂ.
10. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂ.
11. ಜಂಟಿ ನಿರ್ದೇಶಕರು, ಐ.ಇ.ಸಿ., ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂ.



S-PKS